**ಕರ್ನಾಟಕ ಸರ್ಕಾರದ ನಡವಳಿಗಳು**

**ಯ:** 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಜಿಲ್ಲಾ ಪಂಚಾಯತಿಗಳಿಗೆ ವಾರ್ಷಿಕ ರೂ.200.00 ಲಕ್ಷಗಳ ಅಭಿವೃದ್ಧಿ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಪರಿಷ್ಕೃತ ಮಾರ್ಗಸೂಚಿಗಳು.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂ.ಗ್ರಾಅಪ 127 ಜಿಪಸ 2011, ದಿನಾಂಕ 15.07.2011.
2. ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ದಿನಾಂಕ 23.09.2011.
3. ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ದಿನಾಂಕ 29.10.2011.
4. ಸರ್ಕಾರಿ ಆದೇಶ ಸಂ.ಗ್ರಾಅಪ 75 ಜಿಪಸ 2013, ದಿನಾಂಕ 6.5.2013

**ಪ್ರಸ್ತಾವನೆ:**

2011–12 ಹಾಗೂ 2012–13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಲು ಅನಿರ್ಬಂಧಿತ ಅಭಿವೃದ್ಧಿ ಅನುದಾನವನ್ನು ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ರೀತಿ ಬಿಡುಗಡೆ ಮಾಡಿದ ಅನುದಾನವನ್ನು ವಿನಿಯೋಗಿಸುವ ಸಂಬಂಧ ಮೇಲೆ ಓದಲಾದ (1) ರಿಂದ (3) ರಲ್ಲಿರುವ ಸರ್ಕಾರಿ ಆದೇಶಗಳಲ್ಲಿ ವಿವರವಾದ ಮಾರ್ಗಸೂಚಿಗಳನ್ನು ರೂಪಿಸಲಾಗಿತ್ತು.

2013–14ನೇ ಸಾಲಿನಲ್ಲಿ ಪ್ರತಿ ಜಿಲ್ಲಾ ಪಂಚಾಯತಿಗೆ ವಾರ್ಷಿಕ ರೂ.100.00 ಲಕ್ಷಗಳ ಅಭಿವೃದ್ಧಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಯೋಜನೆಯನ್ನು ತಯಾರಿಸಿ ಯಶಸ್ವಿಯಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿವರವಾದ ಮಾರ್ಗಸೂಚಿಗಳ ಅವಶ್ಯಕತೆಯನ್ನು ಮನಗಂಡು ಮೇಲೆ ಓದಲಾದ (1) ರಿಂದ (3) ರಲ್ಲಿರುವ ಸರ್ಕಾರಿ ಆದೇಶಗಳಲ್ಲಿ ಮಾರ್ಗಸೂಚಿಗಳನ್ನು ಹಿಂಪಡೆದು ಮೇಲೆ ಓದಲಾದ (4) ರಲ್ಲಿನ ಸರ್ಕಾರಿ ಆದೇಶದಲ್ಲಿ ಹೊಸ ಮಾರ್ಗಸೂಚಿಗಳನ್ನು ರೂಪಿಸಲಾಗಿತ್ತು.

ಮಾರ್ಗಸೂಚಿಯಲ್ಲಿನ ಕೆಲವು ಅಂಶಗಳನ್ನು ಪರಿಷ್ಕರಿಸುವಂತೆ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ್ದು, ಅದರಂತೆ ಮೇಲೆ (4) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿನ ಮಾರ್ಗಸೂಚಿಯನ್ನು ಪರಿಷ್ಕರಿಸಲು ಸರ್ಕಾರ ತೀರ್ಮಾನಿಸಿದೆ. ಅದರಂತೆ. ಈ ಆದೇಶ.

**ಸರ್ಕಾರಿ ಆದೇಶ ಸಂ.ಗ್ರಾಅಪ 75 ಜಿಪಸ 2013, ಬೆಂಗಳೂರು, ದಿನಾಂಕ 17.07.2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ 2013–14 ಹಾಗೂ ನಂತರದ ವರ್ಷಗಳಲ್ಲಿ ಬಿಡುಗಡೆಯಾಗುವ ಅಭಿವೃದ್ಧಿ ಅನುದಾನ ರೂ.200.00 ಲಕ್ಷಗಳನ್ನು ಬಳಸಿಕೊಳ್ಳಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ.

1. ವಾರ್ಷಿಕ ಹಂಚಿಕೆಯಾಗುವ ಅನುದಾನ ರೂ.200.00 ಲಕ್ಷಗಳಿಗೆ ಜಿಲ್ಲಾ ಪಂಚಾಯತಿಯು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಹಾಗೂ ಅದರ ಅನುಮೋದನೆಯನ್ನು ನೀಡುವುದು.

2. ಈ ಅಭಿವೃದ್ಧಿ ಯೋಜನೆಯು, ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.
3. ಜಿಲ್ಲಾ ಪಂಚಾಯತಿ ಅನುದಾನದಲ್ಲಿ ಬಿಡುಗಡೆಯಾಗುವ/ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಬಹುದು.
4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶ, ಶಾಲಾ ಅಭಿವೃದ್ಧಿ ಮುಂತಾದ ಯೋಜನೆಗಳಲ್ಲಿ ಅಳವಡಿಸಿಕೊಳ್ಳುವುದು.
5. ಗ್ರಾಮೀಣ ರಸ್ತೆಗಳ ನಿರ್ಮಾಣ ಮತ್ತು ಉನ್ನತೀಕರಣಕ್ಕಾಗಿ ಒಟ್ಟಾರೆ ಅನುದಾನದ ಶೇ.20ರಷ್ಟು ಮೀರದಂತೆ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.
6. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಅನುದಾನವನ್ನು ಕಾಯ್ದಿರಿಸುವುದು.
7. ಈ ಕ್ರಿಯಾ ಯೋಜನೆಯು ಜಿಲ್ಲಾ ಕ್ರಿಯಾ ಯೋಜನೆಯ ಭಾಗವಾಗಿರಬೇಕು ಹಾಗು ಪ್ಲಾನ್–ಪ್ಲಸ್ ತಂತ್ರಾಂಶದಲ್ಲಿ ಕ್ರಿಯಾ ಯೋಜನೆಯನ್ನು ಅಪ್‌ಲೋಡ್ ಮಾಡುವುದು.
8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
9. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
10. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
11. ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.
12. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿ ಅನುಮೋದನೆಗೊಂಡಿರುವ ಗ್ರಾಮ ಪಂಚಾಯತಿವಾರು ಕ್ರಿಯಾಯೋಜನೆಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳ ಗ್ರಾಮಸಭೆಯಲ್ಲಿ ಮಾಹಿತಿಗಾಗಿ ಮಂಡಿಸುವುದು.
13. ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
14. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.
15. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
16. ಅನುಮೋದಿತ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದರ ಜೊತೆಗೆ ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿಯೂ ಸಹ ಪ್ರತಿ ಕಾಮಗಾರಿಯ ವಿವರಗಳನ್ನು ಹಂತವಾರು ದಾಖಲಿಸಬೇಕು.
17. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪ್ರಮಾಣ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.
18. ಈ ಅನುದಾನದ ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢೀಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್

ಅಧಿನಿಯಮ, 1993ರ ಪ್ರಕರಣ 256, 258 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).

19. ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಸಕ್ಷಮ ಪ್ರಾಧಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಬೇಕು.
20. ಈ ಯೋಜನೆಯಲ್ಲಿ ಕೈಗೊಳ್ಳಲಾದ ಪ್ರತಿಯೊಂದು ಕಾಮಗಾರಿಗಳು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತದೆ.

**ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ನಿಷೇಧಿತ ಕಾಮಗಾರಿಗಳು/ಕಾರ್ಯಗಳು:**

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;
2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;
3. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;
4. ಕಚೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು.;
5. ಕಚೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;
6. ಸಾದಿಲ್ವಾರು ವೆಚ್ಚ ಮಾಡುವುದನ್ನು;
7. ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಚೇರಿ ಕಾರ್ಯಕ್ಕಾಗಿ ಪಡೆಯುವುದನ್ನು;
8. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು
9. ಬ್ಯಾಂಕಿನಿಂದ ಸ್ವಂತಕ್ಕೆ ಹಣ ಸೆಳೆಯುವ ಪ್ರಕ್ರಿಯೆ (ಇದನ್ನು ಉಲ್ಲಂಘಿಸಿದಲ್ಲಿ ಬ್ಯಾಂಕಿನಿಂದ ಹಣ ಸೆಳೆಯುವ ಅಧಿಕಾರಿ ಹಾಗೂ ಪಂ.ರಾಜ್ ಸಂಸ್ಥೆಯ ಪ್ರತಿನಿಧಿಗಳು ಆ ರೀತಿ ಸೆಳೆದ ಮೊತ್ತವನ್ನು ಶೇ. 15 ರ ಬಡ್ಡಿ ಮೊತ್ತದೊಂದಿಗೆ ಮರುಪಾವತಿ ಮಾಡುವುದರ ಜೊತೆಗೆ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು)
10. ಈ ಅನುದಾನವನ್ನು ಯಾವುದೇ ಕಾರಣಕ್ಕೂ ಚುನಾಯಿತಿ ಪ್ರತಿನಿಧಿಗಳ ಉಪವೇಶನ ಶುಲ್ಕ, ಗೌರವಧನಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ.
11. ಈ ಅನುದಾನದಡಿಯಲ್ಲಿ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tours) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.
12. ಜಿಲ್ಲಾ ಪಂಚಾಯತಿ ಸದಸ್ಯವಾರು ಅನುದಾನ ಹಂಚಿಕೆ ಮಾಡುವುದನ್ನು ನಿಷೇಧಿಸಲಾಗಿದೆ.

**ಕಾರ್ಯಕ್ರಮ ಅನುಷ್ಠಾನದ ಕಾರ್ಯಸೂಚಿ:**

1. ಅಭಿವೃದ್ಧಿ ಯೋಜನೆಯ ತಯಾರಿಕೆ ಹಾಗು ಅನುಮೋದನೆ – ಏಪ್ರಿಲ್/ಮೇ ಮಾಹೆ
2. ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಅನುಮೋದನೆ (ಸಕ್ಷಮ ಪ್ರಾಧಿಕಾರದಿಂದ) – ಮೇ, 15 ರಿಂದ ಜೂನ್ 30.
3. ಯೋಜನೆಯ ಅನುಷ್ಠಾನ – ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮಾಹೆ
4. ಸಾಮಾಜಿಕ ಲೆಕ್ಕಪರಿಶೋಧನೆ (ಜಮಾಬಂಧಿ) – ಆಗಸ್ಟ್ 16 ರಿಂದ ಸೆಪ್ಟೆಂಬರ್ 15

5. ಪ್ರಗತಿ ವರದಿ ಅಪ್ ಲೋಡ್ – ಪ್ರತಿ ಮಾಹೆ 10ರಿಂದ 5ನೇ ದಿನಾಂಕದೊಳಗೆ
6. ವಾರ್ಷಿಕ ಹಣ ಬಳಕೆ ಪ್ರಮಾಣ ಪತ್ರ – ಪ್ರತಿ ವರ್ಷದ ಏಪ್ರಿಲ್ ಮಾಹೆ
7. Non-embezzlement and Non-duplication ಧೃಢೀಕರಣ ಪತ್ರಗಳನ್ನು ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
8. ಪ್ರತಿ ವರ್ಷ ಏಪ್ರಿಲ್ ಮಾಹೆಯಲ್ಲಿ ಯಶೋಗಾಥೆಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಮಾರ್ಗರೇಟ್ ಲೀನಾ ನರೋನ್ಹ) 17/7/13
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು.
3. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾಜ್ ಇಲಾಖೆ.
2. ಕರ್ನಾಟಕ ವಿಕಾಸ/ವೆಬ್ ಸೈಟ್.